† ಶ್ರೀ ಪಿ. ಎಂ. ನಾಡಗೌಡ.—ಇದು ಬಹಳ ಕ್ಲಿಷ್ಟವಾದ ಪ್ರಶ್ನೆ. ಸರ್ಕಾರದವರು ಮುಂಜೂರಾತಿ ಕೊಡುವುದರಲ್ಲೇನೂ ತಡವಾಗಿಲ್ಲ. ಮುಖ್ಯವಾಗಿ ಸ್ಥಾನೀಕ ಸಂಸ್ಥೆಗಳಿಗೆ ಒಂದು ವರಮಾನದ ಮಾರ್ಗವನ್ನು ಉಂಟುಮಾಡಿಕೊಂಡರೆ ಇದು ಬೇಗ ಸಾಧ್ಯವಾಗಬಹುದು.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಈ ಪ್ರಾವಿಡೆಂಟ್ ಫಂಡ್ ಸ್ಕೀಮನ್ನು ಜಾರಿಗೆ ಕೊಡಲು ಇನ್ನೂ ಎಷ್ಟು ಕಾಲ ಬೇಕಾಗುವುದು ?

ಶ್ರೀ ಪಿ. ಎಂ. ನಾಡಗೌಡ.—ತಾಲ್ಲೂಕ್ ಬೋರ್ಡುಗಳು, ಪಂಚಾಯಿತಿಗಳು ಇವೆರ್ಲಾ ಒಪ್ಪಬೇಕು. ಅದಕ್ಕೆ ತಕ್ಕ ವರಮಾನವಿರಬೇಕು. ಇದನ್ನೆರ್ಲಾ ಗಮನಿಸಿ ಆದಷ್ಟೂ ಬೇಗ ಮಾಡುವುದಾಗಿ ಉತ್ತರ ಕೊಡಲಾಗಿದೆ.

ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ.—ಇದು ಬಹಳ ಕ್ಲಿಷ್ಟವಾದ ಪ್ರಶ್ನೆ ಅಂತ ತಾವು ಹೇಳೋಣವಾಯಿತು. ಅದು ತಮ್ಮ ಅಭಿಪ್ರಾಯವೋ ಅಥವಾ ಆ ಬ್ಯಾಂಚಿನವರ ಅಭಿಪ್ರಾಯವೋ ?

ಶ್ರೀ ಪಿ. ಎಂ. ನಾಡಗೌಡ.—ಸರ್ಕಾರದವರು ಎಲ್ಲರ ಅಭಿಪ್ರಾಯವನ್ನೂ ತಿಳಿದು ಮಾಡುತ್ತಾರೆ.

ಶ್ರೀ ಎಂ. ಎಸ್. ಕೃಷ್ಣನ್.—ನಿಯಮಾವಳಿಗಳನ್ನು ರಚಿಸದಿರುವುದಕ್ಕೆ ಕಾರಣಗಳೇನು ಎಂದು ಕೇಳಿದ್ದರೆ ಪರಿಶೀಲಿಸಲಾಗುತ್ತಿದೆ ಎಂದು ಉತ್ತರವಿದೆ. ಇಲ್ಲಿ ಪರಿಶೀಲಿಸುತ್ತಿರುವುದು ಏನನ್ನು ?

ಶ್ರೀ ಪಿ. ಎಂ. ನಾಡಗೌಡ.—ಪ್ರಾವಿಡೆಂಟ್ ಫಂಡಿನ ನಿಯಮಾವಳಿಗಳನ್ನು ರಚಿಸತಕ್ಕ ಬಗ್ಗೆ ಪರಿಶೀಲಿಸಲಾಗುತ್ತಿದೆ ಎಂದು ಉತ್ತರವನ್ನು ಕೊಡಲಾಗಿದೆ.

ಶ್ರೀ ಎಲ್. ಶ್ರೀಕಂಠಯ್ಯ.—ಇವುಗಳನ್ನು ರಚಿಸಲು 10-20 ವರ್ಷಗಳಕಾಲ ಹಿಡಿದಲ್ಲಿ ಮಧ್ಯೆ ಯಾರಾದರೂ ಕಾರ್ಯನಿರ್ವಹಣಾಧಿಕಾರಿಗಳು ನತ್ತರೆ ಅವರ ಸಂಸಾರದ ಗತಿಯೇನು ?

ಶ್ರೀ ಪಿ. ಎಂ. ನಾಡಗೌಡ.—ಹಾಗೆ ರೂಲ್ಸ್‌ಗಳನ್ನು ಅತುರದಲ್ಲಿ ಮಾಡುವುದಕ್ಕಾಗುವುದಿಲ್ಲ.

Spun Silk Mills, Channapatna

138. Sri T. V. KRISHNAPPA (Channapatna).—

Will the Minister for Animal Husbandry, Fisheries, Information and Publicity be pleased to state :—

(*a*) whether it is a fact that the Mysore Government Spun Silk Mills, Channapatna is supplying yarn to the public for weaving;

(*b*) the number of persons that applied for the yarn ;

(*c*) when the tenders were called for this purpose ;

(*d*) the number of tenders received in this behalf ;

(*e*) the lowest and the highest tender ;

(*f*) the amount paid per yard for weaving ?

A.—Sri D. DEVARAJ URS (Minister for Animal Husbandry, Fisheries, Information and Publicity).—

(*a*) Yes.

(*b*) None applied for the yarn: on the other hand it is the Spun Silk Mills who offered yarn for weaving.

† Indicates that the remarks or speeches have not been revised by the member concerned.

(*c*) No tenders were called for.

(*d*) and (*e*) Does not arise in view of reply to clause (*c*).

(*f*) (i) 94 paise per metre for saree fabric with or without gold lace (ii) 75 paise per metre of spun silk fabric woven–width ranging from 30 inches to 48 inches.

ಶ್ರೀ ಟಿ. ಎ. ಕೃಷ್ಣಪ್ಪ.—ದಾರಕ್ಕಾಗಿ ಯಾರೂ ಅರ್ಜಿಗಳನ್ನು ಹಾಕಿಕೊಂಡಿಲ್ಲ ಎಂಬುದಾಗಿ ಉತ್ತರವನ್ನು ಕೊಡಲಾಗಿದೆ. ಇತರ ಅನೇಕರೂ ನಮಗೂ ದಾರವನ್ನೂ ಕೊಡಿ ಎಂದು ಅರ್ಜಿ ಹಾಕಿಕೊಂಡಿರತಕ್ಕದ್ದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಡಿ. ದೇವರಾಜ್ ಅರಸ್.—ನಮ್ಮ ಷರತ್ತುಗಳಿಗೆ ಒಪ್ಪುವುದಾದರೆ ಯಾರಿಗಾದರೂ ಕೊಡ ಬಹುದು.

ಶ್ರೀ ಟಿ. ಎ. ಕೃಷ್ಣಪ್ಪ.—ಅವರ ಷರತ್ತುಗಳಿಗೆ ಒಪ್ಪಿದ್ದರೂ ಅವರು ಕೇವಲ ತಮ್ಮ ಕಾಂಗ್ರೆಸ್ ಸಂಸ್ಥೆಯವರಿಗೆ ಮಾತ್ರವೇ ದಾರವನ್ನು ಕೊಡುತ್ತಿದ್ದಾರೆಂಬುದು ನಿಜವೇ ?

ಶ್ರೀ ಡಿ. ದೇವರಾಜ್ ಅರಸ್.—ನಮ್ಮ ನಿಯಮದ ಪ್ರಕಾರ ಒಂದು ಮಿಾಟರಿಗೆ ಇಷ್ಟು ಬಟ್ಟೆ ಕೊಟ್ಟ ನಂತರ ಅದಕ್ಕೆ ಇಷ್ಟು ಅಂದರೆ 3 ಪರ್ಸೆಂಟ್ ವೇಸ್ಟೇಜನ್ನು ಅಲೋಮಾಡುತ್ತೇವೆಂದು ಇರು ವುದಕ್ಕೆ ಅವರು ಒಪ್ಪಿಲ್ಲ. ಅವರು ಈ ವೇಸ್ಟೇಜನ್ನು ನಾಲ್ಕು ನಾಲ್ಕೂವರೆ ಪರ್ಸೆಂಟ್ ಬಿಡಬೇಕೆಂದು ಕೇಳುತ್ತಿದ್ದಾರೆ. ಮೇಲಾಗಿ ಕೂಲಿದರವನ್ನೂ ಕೂಡ ಹೆಚ್ಚು ಕೊಡಬೇಕೆಂದು ಕೇಳುತ್ತಿದ್ದಾರೆ. ಅದಕ್ಕಾಗಿ ಅವರಿಗೆ ಕೊಡುವುದಕ್ಕಾಗಿಲ್ಲ.

ಶ್ರೀ ಎಚ್. ಸಿದ್ದವೀರಪ್ಪ.—ಆ ಫ್ಯಾಕ್ಟರಿಯಲ್ಲಿ ಒಂದು ವರ್ಷಕ್ಕೆ ಎಷ್ಟು ಮಾಲು ಉತ್ಪತ್ತಿ ಆಗುತ್ತದೆ ?

ಶ್ರೀ ಡಿ. ದೇವರಾಜ್ ಅರಸ್.—10 ಸಾವಿರ ಮಿಾಟರ್ ಉತ್ಪಾದನೆ ಆಗಬಹುದು.

ಶ್ರೀ ಎಚ್. ಸಿದ್ದವೀರಪ್ಪ.—ಯಾರನ್ ಎಷ್ಟು ಉತ್ಪತ್ತಿಯಾಗುತ್ತದೆ ?

ಶ್ರೀ ಡಿ. ದೇವರಾಜ್ ಅರಸ್.— ಮೂರು ಮೂರೂವರೆ ಸಾವಿರ ಕಿಲೋಗ್ರಾಂ.

ಶ್ರೀ ಎಚ್. ಸಿದ್ದವೀರಪ್ಪ.—ಅದರಲ್ಲಿ ಬಟ್ಟೆಗೆ ಎಷ್ಟನ್ನು ಉಪಯೋಗಿಸಲಾಗುತ್ತದೆ, ಉಳಿದು ದನ್ನು ಏನು ಮಾಡುತ್ತೀರಿ ?

ಶ್ರೀ ಡಿ. ದೇವರಾಜ್ ಅರಸ್.—ಅದರಲ್ಲಿ 20 ಪರ್ಸೆಂಟ್ ಬಟ್ಟೆಮಾಡುವುದಕ್ಕೆ ಹೋಗುತ್ತದೆ. ಉಳಿದುದನ್ನು ಹೊರಗಡೆಗೆ ಕಳುಹಿಸಲಾಗುತ್ತದೆ.

ಶ್ರೀ ಎಚ್. ಸಿದ್ದವೀರಪ್ಪ.—ಉಳಿದುದನ್ನು ಸರ್ಕಾರದವರು ಕೇವಲ ಒಬ್ಬ ಕಾಂಗ್ರೆಸ್ ಸದಸ್ಯ ನಿಗೆ ಕೊಡುವುದರಿಂದ ಇನ್ನುಳಿದ ಇದೇ ಉದ್ಯೋಗವನ್ನವಲಂಬಿಸಿರುವ ನೂರಾರು ಜನರಿಗೆ ದಾರ ಸಿಕ್ಕದಹಾಗೆ ಆಗಿರುವುದು ನಿಜವಲ್ಲವೇ ?

ಶ್ರೀ ಡಿ. ದೇವರಾಜ್ ಅರಸ್.—ನಿಜವಲ್ಲ. 1963ರಲ್ಲಿ ಒಂದಾವರ್ತಿ ಅನಿರೀಕ್ಷಿತನಾಗಿ ಮಿಲ ಟೆರಿಯಿಂದ ಆರ್ಡರ್ ಬಂತು. ಆಗ ಡಿಫೆನ್ಸಿಗೆ ನರಬರಾಯಿ ಮಾಡಿದ್ದಾಯಿತು. 1965 ರಲ್ಲಿ ಚೆನ್ನ ಪಟ್ಟಣ ಮಿಲ್ ಒಂದನ್ನು ಬಿಟ್ಟರೆ ಬೇರೆ ಯಾವುದೂ ಇರಲಿಲ್ಲ. ಆದರೆ ಅವರು ಕಂಡೀಷನ್ ಒಪ್ಪದೆ ಇದ್ದ ಕಾರಣ ಅವರಿಗೆ ಕೊಡುವುದಕ್ಕಾಗಲಿಲ್ಲ.

Sri H. SIDDAVEERAPPA.—Is there not a discrimination shown in allotting the excess yarn and conditions are so put that those who have made weaving their main occupation in life are denied because of political consideration ?

Sri D. DEVARAJ URS.—It is not correct ; I deny it. If the conditions are accepted, they will be given. They have not agreed to the conditions.

Sri C. K. RAJAIAH SHETTY.— It is to create monopoly to one particular party that Government is following this policy ; is it not a fact ?

Sri D. DEVARAJ URS.—It is not correct. If conditions are put to one person, it will be put to the other persons also.

ಶ್ರೀ ಎರ್. ಶ್ರೀಕಂಠಯ್ಯ.—ತಮಗೆ ಬಂದಿರುವ ಸುದ್ದಿ ಎಷ್ಟು ನಿಜವೋ ಎಂಬುದು ನನಗೆ ಗೊತ್ತಿಲ್ಲ. ಬಹುಮಟ್ಟಿಗೆ ಸ್ಪನ್‌ಸಿಲ್ಕ್ ಜಪಾನ್‌ಗೆ ಕಳ್ಳತನದಲ್ಲಿ ಹೋಗುತ್ತಿದೆಯೆಂದು ತಿಳಿದುಬಂದಿದೆ. ಈ ವಿಚಾರದಲ್ಲಿ ಕೇಂದ್ರಸರ್ಕಾರದವರು ಸಹಕರಿಸದೆ ಇದ್ದರೆ ನಮ್ಮ ರಾಜ್ಯದಲ್ಲಿರುವ ಸ್ಪನ್ ಸಿಲ್ಕ್ ಗಿರಿಣಿಗಳನ್ನು ಮುಚ್ಚುವ ಸ್ಥಿತಿಗೆ ಬರುತ್ತದೆ. ಆದ್ದರಿಂದ ಈ ಬಗ್ಗೆ ತಾವೇನಾದರು ಕೇಂದ್ರ ಸರ್ಕಾರ ದೊಡನೆ ವ್ಯವಹರಿಸುತ್ತಾ ಬಂದಿದ್ದೀರಾ ?

ಶ್ರೀ ಡಿ. ದೇವರಾಜ್ ಅರಸ್.—ಆ ರೀತಿ ಏನು ಆಗುತ್ತಿಲ್ಲ. ಆ ರೀತಿಯಾಗದಂತೆ ಕೇಂದ್ರ ಸರ್ಕಾರದವರು ಮತ್ತು ಸಿಲ್ಕ್ ಬೋರ್ಡ್‌ನವರು ನಮ್ಮೊಡನೆ ಸಹಕರಿಸುತ್ತಿದ್ದಾರೆ.

ಶ್ರೀ ಎಚ್. ಎನ್. ನಂಜೇಗೌಡ.—ಒಬ್ಬನೇ ವ್ಯಕ್ತಿಗೆ ಸಿಲ್ಕ್‌ದಾರವನ್ನು ಒದಗಿಸುತ್ತಿರುವುದು ತಮಗೆ ಗೊತ್ತಿದೆಯೇ ?

ಶ್ರೀ ಡಿ. ದೇವರಾಜ್ ಅರಸ್.—ನಮ್ಮ ಷರತ್ತಿಗೆ ಒಬ್ಬ ಒಪ್ಪಿದ್ದಾನೆ, ಆದ್ದರಿಂದ ಒಬ್ಬನಿಗೇ ಒದಗಿಸುತ್ತಿದ್ದೇವೆ. ಬೇರೆಯವರು ನಮ್ಮ ಷರತ್ತಿಗೆ ಒಪ್ಪಿದರೆ ಅವರಿಗೂ ಒದಗಿಸುತ್ತೇವೆ.

Construction of School Building at Dodda Kanagal Village

141. Sri K. P. CHIKKE GOWDA (Sakleshpur).—

Will the Minister for Education be pleased to state:—

(*a*) the stage at which the matter of the refund of the contribution amount deposited by the villagers of Dodda Kanagal Village in Alur taluk, Hassan district for construction of school building, stands now ;

(*b*) whether it has come to the notice of the Government that the construction work is almost complete and payment of bills to the contractor held up ?

A.—Sri K. V. SHANKARA GOWDA (Minister for Education).—

(*a*) The refund bill is under verification in the District Treasury.

(*b*) Yes.

ಶ್ರೀ ಕೆ. ಪಿ. ಚಿಕ್ಕೇಗೌಡ.—ಸ್ವಾಮಿ, ನನ್ನ ಪ್ರಶ್ನೆಗೆ ಉತ್ತರವಾಗಿ ಮರುಪಾವತಿ ಮಾಡಬೇಕಾದ ಬಿಲ್ಲನ್ನು ಜಿಲ್ಲಾ ಖಜಾನೆಯಲ್ಲ ತಾಳೆ ನೋಡರಾಗುತ್ತಿದೆಯೆಂದು ಹೇಳಿದ್ದೀರಿ. ಒಂದು ವರ್ಷದಿಂದಲೂ, ತಾಳೆ ನೋಡುತ್ತಿದ್ದೀರಾ ?

ಶ್ರೀ ಕೆ. ವಿ. ಶಂಕರಗೌಡ.—ಆ ಬಗ್ಗೆ ಕೆಲವು ಟೆಕ್ನಿಕಲ್ ಡಿಫಿಕಲ್ಟೀಸ್ ಇತ್ತು. ಆದ್ದರಿಂದ ನಿಧಾನವಾಗಿದೆ.

ಶ್ರೀ ಕೆ. ಪಿ. ಚಿಕ್ಕೇಗೌಡ.—ಈಗಾಗಲೇ 600 ರೂಪಾಯಿಗಳನ್ನು ಕೊಟ್ಟಿದ್ದೀರಿ, ಉಳಿದ 1,700 ರೂಪಾಯಿಗಳನ್ನು ಕೊಡಲು ತಾಳೆ ನೋಡರಾಗುತ್ತಿದೆಯೆಂದು ಹೇಳುತ್ತೀರಿ; ಠೇವಣಿ ಕೊಟ್ಟಿದ್ದೇ ತಪ್ಪೇ ?

ಶ್ರೀ ಕೆ. ವಿ. ಶಂಕರಗೌಡ.—ಕೆಲವು ರೆಕಾರ್ಡ್‌ಗಳನ್ನು ವೆರಿಫೈ ಮಾಡಬೇಕಾಗಿರುವುದರಿಂದ ನಿಧಾನವಾಗಿದೆ.

ಶ್ರೀ ಕೆ. ಪಿ. ಚಿಕ್ಕೇಗೌಡ.—ಕಾಮಗಾರಿಯ ಕೆಲಸವನ್ನು ಬಹುಪಾಲು ಮುಗಿಸಿದ್ದರೂ ಸಹ ಸಂಬಂಧಪಟ್ಟ ಕಂಟ್ರಾಕ್ಟರುಗಳಿಗೆ ಬಿಲ್ಲುಗಳ ಪೊಬಲಗನ್ನು ಪಾವತಿ ಮಾಡದಿರುವುದರಿಂದ ಅವರಿಗೆ ತೊಂದರೆಯಾಗುವುದಿಲ್ಲವೆ ?

ಶ್ರೀ ಕೆ. ವಿ. ಶಂಕರಗೌಡ.—ತೊಂದರೆಯಾಗದಂತೆ ಹಾಗ್ರತೆ ಹಣವನ್ನು ಕೊಡರಾಗುತ್ತದೆ